ನೆತ್ತಿಗೇರಿದ ಸೂರ್ಯ ಇಳಿಯ ಹತ್ತಿದ್ದಾನೆ.
ಹೊತ್ತಾಯ್ತು.

ಇಂತಹ ಇಳಿಗಾಲದಲ್ಲೂ
ಉಳಿದ ಅಲ್ಪ ಕಾಲದಲ್ಲೂ
ಮತ್ತೆ ಬೆಳಸ ಬೆಳೆಯೆನೇ?
ಹರಗಬರದೆ ಬಿಟ್ಟ ಹೊಲವೆ
ಬಂಜೆ ಬಂಜರೆಂದ ನೆಲವೆತನ್
ಒಳಗಿನೊಳಗೆ ಮರಳಿ ಪಡೆದು
ಒಳಸೆಲೆಗಳ ರಸವನುಮಳ
ತನ್ನ ಮೂಲ ಕಸುವನು
ಹೂದೆನೆಗಳು ತುಂಬಿ ತೊನೆವ
ಭರ್ತಿ ಪೈರ ನಿಲಿಸೆನೆ?
ಮಳೆ ಗಾಳಿ ಬಿಸಿಲುಗಳು
ಉಣ್ಣಿಸುತಿವೆ, ಹಣ್ಣಿಸುತ್ತಿವೆ
ನಿತ್ಯ ಬೀಜ ಧಾರಣೆ
ಬಾಳ ಕೃಷಿಯ ರಸಾಯನಿಯ ಗುಟ್ಟನೆಲ್ಲ
ಬಲ್ಲರಾರು?

ಪಂಚಭೌತದೀ ಪವಾಡದಲ್ಲಿ ನಮ್ಮದೆಷ್ಟು ಪಾಲು?

**(ಎಪ್ಪತ್ತೆರಡು ಕವಿತೆಗಳು, ಪುಟ 180)**

### 3

ಗಂಗಾಧರ ಚಿತ್ತಾಲರ ಕಾವ್ಯರೂಪ ಮತ್ತು ಭಾಷೆಗೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ಹೇಳುವುದರೊಂದಿಗೆ ಈ ಬರವಣಿಗೆಯನ್ನು ಮುಗಿಸಬಹುದು.

1. ಚಿತ್ತಾಲರ ಕವಿತೆಯು ಮನಸ್ಸಿನಲ್ಲಿ ಓದಿಕೊಳ್ಳಲೆಂದು ಬರೆದುದಲ್ಲ. ಗಟ್ಟಿಯಾಗಿ, ಆದರೆ ಸಾವಧಾನವಾಗಿ ಅದರ ಗದ್ಯತೆ ಮತ್ತು ಲಯಗಾರಿಕೆಗಳಿಗೆ ಧಕ್ಕೆ ಬರದಂತೆ ಓದಿಕೊಳ್ಳುವುದು ಅದನ್ನು ಒಳಗೊಳ್ಳುವ, ಒಳಗಿಟ್ಟುಕೊಳ್ಳುವ ಹಾದಿ. ಹಾಗೆಂದು ಅವು ಹಾಡಲೆಂದು ಬರೆದು ಬಂದವೂ ಅಲ್ಲ. ಅದರದು ಸ್ವಗತ ಮತ್ತು ಉದ್ಘೋಷಗಳ (ಇನ್ವೊಕೇಶನ್) ಸಂಯೋಜನೆ. ಪು.ತಿ.ನ. ಅವರು ಬೇರೆ ಯಾವುದೋ ಸಂದರ್ಭದಲ್ಲಿ ಹೇಳಿರುವಂತೆ, ಚಿತ್ತಾಲರದು ಭಾವನೆಗಳಿಂದ ಪ್ರಚೋದಿತವಾಗಿರುವ ಬೌದ್ಧಿಕತೆ. ಅವರು ಪದಗಳ ಆಯ್ಕೆ ಮತ್ತು ಜೋಡಣೆಗಳಲ್ಲಿ ತೋರಿಸುವ ತಿಳಿವಳಿಕೆಯು, ಕಂಡರೂ ಥಾಳಾಗಿ ಅಬ್ಬರಿಸುವುದಿಲ್ಲ.

2. ಈ ಕವಿಯ ಮನೆಮಾತು ಕನ್ನಡವಲ್ಲ. ಅವರು ಆಡುಮಾತಿನ, ಪ್ರಾದೇಶಿಕ ಗದ್ಯವನ್ನು ಬಳಸುವುದಿಲ್ಲ. ಆದರೆ ಕನ್ನಡ ನುಡಿಯ ವಾಕ್ಯರಚನೆ, ಪದರಚನೆ ಮತ್ತು ಅಷ್ಟೇ ಮುಖ್ಯವಾಗಿ ಅದರ ಕಾಕು, ಅವಧಾರಣೆ ಮತ್ತು ಕುಣಿತ-ಮಣಿತಗಳನ್ನು ಅವರು ಬಲ್ಲರು. ಅವರ ಕವಿತೆಯನ್ನು ಇದೆಲ್ಲದಕ್ಕೂ ಗಮನ ಕೊಟ್ಟು ಓದಿದಾಗ ನಮ್ಮ ಕವಿತೆಯನ್ನು ನಮಗೆ ನಾವೇ ಹೇಳಿಕೊಳ್ಳುತ್ತಿರುವಂತೆ ಭಾಸವಾಗುತ್ತದೆ.

3. ವೈಯಕ್ತಿಕ ಅನುಭವದ ಮಂಡನೆಯು ಭಾವತೀವ್ರತೆ/ಭಾವುಕತೆಗಳಿಗೆ ಎಡೆ ಮಾಡಿಕೊಡುತ್ತದೆ. ಆದರೆ, ಚಿತ್ತಾಲರು ಅದನ್ನು ಭಾಷೆಯ ಬಲದಿಂದಲೇ, ಭಾವನೆ-ಚಿಂತನೆಗಳನ್ನು ಒಂದುಗೂಡಿಸುವುದರಿಂದಲೇ ತಪ್ಪಿಸಿಕೊಳ್ಳುತ್ತಾರೆ. ಅದರಿಂದ ಅವುಗಳಿಗೆ ನೋವನ್ನು ಧರಿಸುವ, ಧ್ಯಾನಿಸುವ ಶಕ್ತಿ ಬರುತ್ತದೆ. ಹೀಗಾದಾಗ, ಕವಿತೆಯ ಓದಿಗೆ ಔಷಧೀಯ ಶಕ್ತಿ ಬರುತ್ತದೆ. ಅದರಿಂದಲೇ ಅವರ ಮುಖ್ಯ ಕವಿತೆಗಳು ತಲ್ಲಣದಲ್ಲಿ ಮೊದಲಾಗಿ ತಿಳಿವಳಿಕೆಯಲ್ಲಿ ಮುಗಿಯುತ್ತವೆ. ಓದುಗರೂ ಅದರಲ್ಲಿ ಭಾಗವಹಿಸುತ್ತೇವೆ. ನೋವನ್ನು ನುಂಗಿನಿಲುವ, ಸಿಡುಕದ, ಶಪಿಸದ, ಗೊಣಗದ ಈ 'ನೀಲಕಂಠತನ'ವು ನಮ್ಮ ಕಾಲದ ಇತರ ಕವಿಗಳಲ್ಲಿ ಅಪರೂಪ. ಈ ಕವಿ, ಜೀವನವನ್ನು ಕುರಿತ ನಮ್ಮ ದೃಷ್ಟಿಕೋನವನ್ನು ತಿದ್ದುವ ಕೆಲಸ ಮಾಡುತ್ತಾರೆ. ಘನವಾದ ಬರವಣಿಗೆಗೆ ಇದು ಸಾಧ್ಯ.

4. ಇವರ ಕಾವ್ಯಭಾಷೆಯಲ್ಲಿ 'ಮಾತುಗಾರಿಕೆ' ಜಾಸ್ತಿ, ಧ್ವನಿಶಕ್ತಿ ಕಡಿಮೆ, 'ಇದು ಕವಿಯ ಚಿಂತನೆಯನ್ನೂ ಮೀರಿದ ಅನೂಹ್ಯದ ಕಡೆಗೆ ಕೈಚಾಚುವುದಿಲ್ಲ'